# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/03/2021–22

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 04.12.2021

**ದಿನಾಂಕ: 04.12.2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:–**

**ಸಭೆಗೆ ಹಾಜರಿದ್ದವರು:**

- ಶ್ರೀ ಶ್ರೀನಿವಾಸಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಡಾ॥ ಧಯಾಕರ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) (BWSSB)

**ವಾರ್ಡ್ ಸಮಿತಿ ಸದಸ್ಯರು**

- ಶ್ರೀ. ಅಂತೋಣಿ ದಾಸ್, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ ಶ್ರೀಕಾಂತ್, ಆಮ್ಕೋ ಬಡಾವಣೆ, ಸದಸ್ಯರು
- ಶ್ರೀ ಅಂಜನಪ್ಪ, ಬಿ.ಬಿ ನಗರ ಸದಸ್ಯರು
- ಶ್ರೀ ವಿನಯ್, ಟಾಟಾನಗರ ನಗರ ಸದಸ್ಯರು
- ಶ್ರೀ ಕೃಷ್ಣಕುಮಾರ್ ಸಿ, ಡಿಫೆನ್ಸ್ ಕಾಲೋನಿ ಸದಸ್ಯರು
- ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ, ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿ ರವರು ಮಾತನಾಡುತ್ತ, ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಓದಿ ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಿರುವ ಕುರಿತು ಹಾಜರಿದ್ದ ಅಧಿಕಾರಿಗಳಿಗೆ ಮತ್ತು ವಸತಿ ಕ್ಷೇಮಾಭಿವೃಧಿ ಸಂಘದ ಸದಸ್ಯರುಗಳ ಜೊತೆಗೆ ಚರ್ಚಿಸಿದರು.

ಶ್ರೀ ವಿನಯ್, ಟಾಟಾನಗರ ನಗರ ನಿವಾಸಿಗಳು ಮಾತನಾಡಿ ಚರಂಡಿಯಲ್ಲಿ ಸಿಲ್ಟ್ ತುಂಬಿರುವುದರಿಂದ ನೀರಿನ ಹರಿವು ಸಾರಾಗವಾಗಿ ಹರಿಯದೆ ಸ್ಥಗಿತವಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯನ್ನುಂಟು ಮಾಡುತ್ತಿದೆ ಎಂದು ಸಭೆಯಲ್ಲಿ ಮನವಿ ಮಾಡಿದರು.

ಈ ಕುರಿತು ನೋಡಲ್ ಅಧಿಕಾರಿಗಳು ಮಾತನಾಡಿ ಸಿಲ್ಟ್ ಮತ್ತು ಟ್ರಾಕ್ಟರ್ ಬಿಟ್ಟು ಸಮಸ್ಯೆಯನ್ನು ಬಗೆಹರಿಸಲು ಶ್ರೀ ಪ್ರವೀಣ್ ರವರಿಗೆ ಸೂಚಿಸಿದರು. ನಂತರ ಶ್ರೀ ಪ್ರವೀಣ್, ಕಿರಿಯ ಅಭಿಯಂತರರು ಮಾತನಾಡಿ ಸದರಿ ಸಿಲ್ಟ್ ಮಣ್ಣನ್ನು ತೆಗೆದು ಡಂಪಿಂಗ್ ಯಾರ್ಡ್‌ಗೆ ಸ್ಥಳಾಂತರಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಶ್ರೀ ಅಂಜನಪ್ಪ, ಬಿ.ಬಿ ನಗರ ಸದಸ್ಯರು ಮಾತನಾಡಿ, ಸದರಿ ಬಡಾವಣೆಗೆ ಬೋರ್‌ವೆಲ್ ಕೊಳವೆಬಾವಿಯನ್ನು ಕೊರೆಯಿಸುವಂತೆ ಸಭೆಯಲ್ಲಿ ಮನವಿ ಮಾಡಿದರು ಬಡಾವಣೆಯಲ್ಲಿ ಈಗಾಗಲೇ ನೀರಿನ ಸಮಸ್ಯೆ ಇರುವುದರಿಂದ ಬಡಾವಣೆಗಳಲ್ಲಿ ನೀರಿನ ಅಭಾವ ಹೆಚ್ಚಾಗಿರುತ್ತದೆ ಹಾಗೂ ಬ್ಲಾಕ್ ಸ್ಪಾಟ್‌ಗಳನ್ನು ಸರಿಪಡಿಸಿ ಅದನ್ನು ಸುರಕ್ಷಿತಗೊಳಿಸಲು ಹಾಗೂ ಮೋರಿ ಸ್ಲಾಬ್‌ಗಳನ್ನು ಹಾಕಿಸಿ ಕೊಡುವಂತೆ ಸಭೆಗೆ ತಿಳಿಸಿದರು.

ಶ್ರೀ ಪ್ರವೀಣ್ ಎ.ಆರ್, ಕಿರಿಯ ಅಭಿಯಂತರರು ರವರು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿ ಕೊಡುವುದಾಗಿ ಸಭೆಗೆ ತಿಳಿಸಿದರು

ಶ್ರೀ. ಅಂತೋಣಿ ದಾಸ್, ಸಹಾಕಾರನಗರ ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು ಮತ್ತು ಶ್ರೀ ಕೃಷ್ಣಕುಮಾರ್ ಸಿ, ಡಿಫೆನ್ಸ್ ಕಾಲೋನಿ ಸದಸ್ಯರು ಮಾತನಾಡಿ ಸಹಕಾರನಗರದಲ್ಲಿ ರಸ್ತೆಗುಂಡಿಗಳಾಗಿದ್ದು, ಇದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿದ್ದು, ರಸ್ತೆಗುಂಡಿಗಳನ್ನು ಮುಚ್ಚಲು ಮನವಿ ಮಾಡಿಕೊಂಡರು.

ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಮಾತನಾಡಿ ರಸ್ತೆಗುಂಡಿಗಳಿಗೆ ವೆಟ್‌ಮಿಕ್ಸ್ ಹಾಕಲಾಗಿದ್ದು ಮಳೆ ನಿಂತ ಮೇಲೆ ಡಾಂಬರೀಕರಣ ಮಾಡಲಾಗುವುದು ಹಾಗೂ ಸಮಸ್ಯೆ ಬಗೆಹರಿಸಲಾಗುವುದೆಂದು ಸಭೆಗೆ ತಿಳಿಸಿದರು.

ಆರೋಗ್ಯ ಇಲಾಖೆಯ ವೈದ್ಯರಾದ ಡಾ॥ ಧಯಾಕರ್ ರವರು ಕೋವಿಡ್ ಸೋಂಕಿನ ಬಗ್ಗೆ ಮಾತನಾಡಿ ವಾರ್ಡ್ ಮಟ್ಟದಲ್ಲಿ ಚುಚ್ಚುಮದ್ದುಗಳನ್ನು ನೀಡುತ್ತಿರುವುದನ್ನು ಸೂಚಿಸಿದರು ಹಾಗೂ ಇದರ ಬಗ್ಗೆ ಎಚ್ಚರವಹಿಸಲು ಅಧಿಕಾರಿಗಳು ಸಮಿತಿ ಸದಸ್ಯರಿಗೆ ಮನದಟ್ಟು ಮಾಡಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಹಾಗೂ ಈ ಸಭೆಗೆ ಗೈರು ಹಾಜರಿದ್ದವರಿಗೆ ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡಲು ಸೂಚಿಸಿದರು. ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು ನಂತರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08

<u>ಪ್ರತಿಯನ್ನು:-</u>

1. ಮಾನ್ಯ ಆಡಳಿತ ಅಧಿಕಾರಿಗಳು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ವಲಯ ಅರಣ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಗೆ ಹಾಜರಾಗಲು ತಿಳಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
12. ಕಛೇರಿ ಕಡತಕ್ಕೆ.